**07/1**

# 2006

## CRIMINOLOGY

### Paper 1

*Time : 3 Hours ]* *[ Maximum Marks : 300*

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

SEAL

## PART A

*4×5=20*

*Answer each question in about 50 words. Each question carries 5 marks.*

1. (a) Define 'Crime'. State the classification of crimes under the Indian Penal Code.

   (b) What, according to Lombroso, is the causation of crime ?

   (c) "One important aspect of Victimology is the reluctance of victims to report cases to the police." — Elucidate.

   (d) What constitutes the offence of 'Dacoity' ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) 'ಅಪರಾಧ' ಎಂದರೇನು ? ಭಾರತೀಯ ದಂಡ ಸಂಹಿತೆಯ ಪ್ರಕಾರ ಅಪರಾಧಗಳನ್ನು ಹೇಗೆ ವರ್ಗೀಕರಿಸಲಾಗಿದೆ ?

(ಬಿ) ಲೊಂಬ್ರೋಸೋ ಅಭಿಮತದಂತೆ ಅಪರಾಧ ಉಂಟಾಗಲು ಕಾರಣವೇನು ?

(ಸಿ) "'ವಿಕ್ಟಿಮಾಲಜಿ'ಯ ಒಂದು ಮುಖ್ಯ ಸಂಗತಿ ಏನೆಂದರೆ ಪ್ರಕರಣಗಳನ್ನು ಪೊಲೀಸರಿಗೆ ವರದಿಮಾಡುವ ಬಗ್ಗೆ ಬಲಿಯಾದ ವ್ಯಕ್ತಿಗಳು ಆಸಕ್ತಿ ತಾಳುವುದಿಲ್ಲ." — ಇದನ್ನು ವಿವರಿಸಿ.

(ಡಿ) ಒಂದು ಅಪರಾಧವು 'ಡಕಾಯಿತಿ' ಎನಿಸಿಕೊಳ್ಳಬೇಕಾದರೆ ಅದು ಯಾವ ಅಂಶಗಳನ್ನು ಹೊಂದಿರಬೇಕು ?

## PART B

*10×10=100*

*Answer each question in about 100 words. Each question carries 10 marks.*

**2.** State the objects of Criminal trials. What are the functions of Criminal Law Courts ?

**3.** In the light of the judgment of the High Court of Bombay in the Maruti Shripati Dubal vs. State of Maharashtra, is suicide considered an offence under the Indian Penal Code ?

**4.** State the objectives of the study of Criminology.

**5.** What is a 'Dying declaration' ? What are the formalities for recording it ?

**6.** What is a 'Confession' ? When is it relevant ?

**7.** Explain the scope of the defence of 'Private defence'.

**8.** Explain the powers of the Police regarding search and seizure.

**9.** How are fingerprints helpful in detecting the offender ? What are the techniques of fingerprinting ?

**10.** Explain 'Assault' as defined in the Indian Penal Code.

**11.** State the characteristics of a Crime.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಕ್ರಿಮಿನಲ್ ವಿಚಾರಣೆಗಳ ಉದ್ದೇಶವೇನು ? ಕ್ರಿಮಿನಲ್ ಕಾನೂನು ನ್ಯಾಯಾಲಯಗಳ ಪ್ರಕಾರ್ಯಗಳು ಯಾವುವು ?

**3.** *ಮಾರುತಿ ಶ್ರೀಪತಿ ದುಬಾಲ vs. ಮಹಾರಾಷ್ಟ್ರ ರಾಜ್ಯ* ಪ್ರಕರಣದಲ್ಲಿ, ಮುಂಬೈ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ನೋಡಿದಾಗ, ಭಾರತೀಯ ದಂಡ ಸಂಹಿತೆಯ ಪ್ರಕಾರ ಆತ್ಮಹತ್ಯೆಯನ್ನು ಒಂದು ಅಪರಾಧ ಎಂದು ಪರಿಗಣಿಸಲಾಗುವುದೆ ?

**4.** ಅಪರಾಧಶಾಸ್ತ್ರ ಅಧ್ಯಯನದ ಧ್ಯೇಯಗಳೇನು ? ನಿರೂಪಿಸಿ.

**5.** 'ಮರಣಕಾಲೀನ ಹೇಳಿಕೆ' ಎಂದರೇನು ? ಇದನ್ನು ದಾಖಲಿಸುವ ಔಪಚಾರಿಕ ವಿಧಾನಗಳು ಯಾವುವು ?

**6.** 'ತಪ್ಪೊಪ್ಪಿಗೆ' ಎಂದರೇನು ? ಇದು ಯಾವಾಗ ಪ್ರಸ್ತುತವಾಗುತ್ತದೆ ?

**7.** ವೈಯಕ್ತಿಕ ಪ್ರತಿರಕ್ಷಣೆಯ ವಾದದ ವ್ಯಾಪ್ತಿಯೇನು ? ವಿವರಿಸಿ.

**8.** 'ಹುಡುಕುವುದು ಮತ್ತು ವಶಪಡಿಸಿಕೊಳ್ಳುವುದು' — ಇದಕ್ಕೆ ಸಂಬಂಧಿಸಿದಂತೆ, ಪೊಲೀಸಿಗೆ ಇರುವ ಅಧಿಕಾರಗಳನ್ನು ವಿವರಿಸಿ.

**9.** ಅಪರಾಧಿಯನ್ನು ಪತ್ತೆಹಚ್ಚಲು ಬೆರಳಚ್ಚು ಮುದ್ರೆಗಳು ಹೇಗೆ ಸಹಾಯಕ ? ಬೆರಳಚ್ಚು ಮುದ್ರಣದ ತಾಂತ್ರಿಕ ವಿಧಾನಗಳು ಯಾವುವು ?

**10.** ಭಾರತೀಯ ದಂಡ ಸಂಹಿತೆಯಲ್ಲಿ 'ಹಲ್ಲೆ' ಎಂಬುದಕ್ಕೆ ನೀಡಿರುವ ವ್ಯಾಖ್ಯಾನವೇನು ? ವಿವರಿಸಿ.

**11.** 'ಅಪರಾಧ'ದ ವಿಶಿಷ್ಟ ಲಕ್ಷಣಗಳನ್ನು ನಿರೂಪಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** Examine insanity as a defence to an accusation of an offence.

The accused had committed gruesome murder of two women without any reason or motive. But, he had some previous history of mental illness. It is also proved that, even at the time of arrest, he was not behaving normally. But he was suffering from insanity at the time of investigation. Can he be held guilty of murder ?

**13.** Discuss the Sociological theory of Criminal Behaviour.

X, a child of poor parents, commits thefts from large stores, to feed his younger sister and also the neighbouring children. The parents also do not disapprove of these thefts from wealthy persons. How has Sutherland classified these acts ?

**14.** When can several persons be held liable for a criminal act committed jointly ?

A, B, C and D, with an intention to kill M, shot R, by mistake. The gun was fired by A. All fled from the scene. But, B was arrested and prosecuted for the murder of R. B took the defence that he had just accompanied A and the intention was not to kill R. Decide.

**15.** What constitutes the offence of Extortion ?

In order to compel the debtor to pay a long outstanding debt of Rs. 50,000, the creditor goes with his lawyer, to the debtor and threatens him that if the debt is not paid, then and there, he will start legal proceedings and claim that amount with penal interest, damages and court expenses. Hearing this threat, the debtor pays. Does this amount to an offence of extortion ?

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಒಂದು ಅಪರಾಧದ ಆರೋಪಕ್ಕೆ ಪ್ರತಿರಕ್ಷಣೆಯಾಗಿ 'ಮನೋವಿಕಲತೆ'ಯನ್ನು ವಾದವಾಗಿ ಬಳಸುವ ಬಗ್ಗೆ ಪರಿಶೀಲಿಸಿ.

ಒಬ್ಬ ಆಪಾದಿತನು ಯಾವುದೇ ಕಾರಣ ಅಥವಾ ಉದ್ದೇಶವಿಲ್ಲದೆ ಇಬ್ಬರು ಹೆಂಗಸರನ್ನು ಭೀಕರವಾಗಿ ಕೊಲೆ ಮಾಡಿದ್ದಾನೆ. ಆದರೆ, ಆತನ ಪೂರ್ವ ಚರಿತ್ರೆಯ ಪ್ರಕಾರ ಅತನು ಮಾನಸಿಕ ಅಸ್ವಸ್ಥತೆ ಹೊಂದಿದ್ದ. ಆತನನ್ನು ಬಂಧಿಸುವ ಸಮಯದಲ್ಲೂ ಅತನ ವರ್ತನೆ ಸಹಜವಾಗಿರಲಿಲ್ಲ ಎಂಬುದನ್ನು ಸಾಬೀತು ಮಾಡಲಾಗಿದೆ. ಅದರೆ, ವಿಚಾರಣೆಯ ಸಂದರ್ಭದಲ್ಲಿ ಆತ ಮನೋವಿಕಲತೆಯಿಂದ ನರಳುತ್ತಿದ್ದ. ಅತನ ಮೇಲೆ ಕೊಲೆಯ ತಪ್ಪನ್ನು ಹೊರಿಸಬಹುದೆ ?

**13.** ಕ್ರಿಮಿನಲ್ ನಡವಳಿಕೆಯ 'ಸಮಾಜಶಾಸ್ತ್ರೀಯ ಸಿದ್ಧಾಂತ' ಕುರಿತು ಚರ್ಚಿಸಿ.

ಬಡ ತಂದೆತಾಯಿಗಳ X ಎಂಬ ಒಬ್ಬ ಹುಡುಗ ದೊಡ್ಡ ದೊಡ್ಡ ಅಂಗಡಿಗಳಿಂದ ಕಳವು ಮಾಡುತ್ತಿದ್ದ. ತನ್ನ ತಂಗಿ ಹಾಗೂ ನೆರೆಹೊರೆಯ ಬಡ ಮಕ್ಕಳಿಗೆ ಆಹಾರ ಒದಗಿಸುವುದು ಈ ಕಳ್ಳತನದ ಉದ್ದೇಶ. ಶ್ರೀಮಂತರಿಂದ ಕದಿಯುವ ಈ ಕೃತ್ಯಕ್ಕೆ ತಂದೆತಾಯಿಯರ ಆಕ್ಷೇಪಣೆ ಇರಲಿಲ್ಲ. ಸದರ್‌ಲ್ಯಾಂಡ್ ಅವರು ಈ ಕೃತ್ಯಗಳನ್ನು ಹೇಗೆ ವರ್ಗೀಕರಿಸಿದ್ದಾರೆ ?

**14.** ಒಟ್ಟಾಗಿ ಸೇರಿ ಮಾಡಿದ ಕ್ರಿಮಿನಲ್ ಕೃತ್ಯಕ್ಕಾಗಿ ಅನೇಕ ವ್ಯಕ್ತಿಗಳನ್ನು ಯಾವಾಗ ಹೊಣೆಯಾಗಿಸಬಹುದು ?

A, B, C ಮತ್ತು D ಎಂಬವರು M ಎಂಬಾತನನ್ನು ಕೊಲ್ಲುವ ಉದ್ದೇಶ ಹೊಂದಿರುತ್ತಾರೆ. ಆದರೆ, M ಎಂದು ತಪ್ಪು ತಿಳಿದು R ಎಂಬಾತನನ್ನು ಗುಂಡಿಟ್ಟು ಕೊಲ್ಲುತ್ತಾರೆ. A ಎಂಬಾತನು ಗುಂಡು ಹೊಡೆದವನು. ಎಲ್ಲರೂ ಆ ಜಾಗದಿಂದ ಪರಾರಿಯಾಗುತ್ತಾರೆ. ಆದರೆ, B ಎಂಬಾತನನ್ನು ಬಂಧಿಸಿ R ಅನ್ನು ಕೊಲೆಮಾಡಿದ್ದಕ್ಕಾಗಿ ವಿಚಾರಣೆಗೆ ಗುರಿಪಡಿಸಲಾಗುತ್ತದೆ. ಆಗ B ಯು, ತಾನು ಸುಮ್ಮನೆ A ಯ ಜೊತೆಗಿದ್ದುದಾಗಿಯೂ ಮತ್ತು R ನನ್ನು ಕೊಲ್ಲುವ ಉದ್ದೇಶವಿರಲಿಲ್ಲವೆಂದೂ ಪ್ರತಿವಾದಿಸುತ್ತಾನೆ. ಇದನ್ನು ಹೇಗೆ ತೀರ್ಮಾನಿಸುತ್ತೀರಿ ?

**15.** 'ಬಲಾತ್ಕಾರದ ಸುಲಿಗೆ' ಅಪರಾಧದ ಲಕ್ಷಣಗಳು ಯಾವುವು ?

ದೀರ್ಘಕಾಲದಿಂದ ತೀರಿಸದಿದ್ದ 50,000 ರೂ. ಗಳನ್ನು ಸಲ್ಲಿಸುವಂತೆ ಸಾಲಗಾರನನ್ನು ಒತ್ತಯಿಸುವ ಉದ್ದೇಶದಿಂದ ಸಾಲ ನೀಡಿದಾತನು ತನ್ನ ವಕೀಲನೊಂದಿಗೆ. ಸಾಲಗಾರನ ಬಳಿಗೆ ಹೋಗಿ ಈಗಿಂದೀಗಲೇ ಸಾಲವನ್ನು ವಾಪಸು ಮಾಡದಿದ್ದರೆ ಕಾನೂನು ಕ್ರಮವನ್ನು ಜರುಗಿಸಿ ದಂಡಬಡ್ಡಿ, ನಷ್ಟಪರಿಹಾರ ಹಾಗೂ ನ್ಯಾಯಾಲಯ ವೆಚ್ಚಗಳನ್ನು ವಸೂಲುಮಾಡಿಕೊಳ್ಳುವುದಾಗಿ ಬೆದರಿಸುತ್ತಾನೆ. ಈ ಬೆದರಿಕೆಗೆ ಹೆದರಿ ಸಾಲಗಾರನು ಹಣವನ್ನು ಹಿಂದಿರುಗಿಸುತ್ತಾನೆ. ಇದು 'ಬಲಾತ್ಕಾರದ ಸುಲಿಗೆ'ಯ ಅಪರಾಧ ಎನಿಸಿಕೊಳ್ಳುವುದೆ ?

[Turn over

**16.** Explain the requirements of the offence of Culpable Homicide caused by grave and sudden provocation.

A wife threatened to leave her husband for ever, without prior reason and removed her *mangalsutra* from her neck and threw it on her husband's face. The husband killed his wife, in a fit of anger. Is the husband guilty of murder ?

**17.** How is the questioned handwritten document examined and proved ?

X has filed a suit claiming property under a will. The will is challenged as bogus. How should the execution of the will be proved by X ?

**16.** ಗಂಭೀರವಾದ ಹಾಗೂ ಹಠಾತ್ ಪ್ರಚೋದನೆಯಿಂದ ಉಂಟಾದ 'ಅಪರಾಧಿಕ ನರಹತ್ಯೆ' ಅಪರಾಧದ ಲಕ್ಷಣಗಳೇನು ?

ಯಾವುದೇ ಪೂರ್ವಕಾರಣವಿಲ್ಲದೆ ಒಬ್ಬ ಪತ್ನಿಯು ತಾನು ತನ್ನ ಗಂಡನನ್ನು ಎಂದೆಂದಿಗೂ ಬಿಟ್ಟು ಹೋಗುವುದಾಗಿ ಹೆದರಿಸಿ ತನ್ನ ತಾಳಿಯನ್ನು ಕತ್ತಿನಿಂದ ತೆಗೆದು ಗಂಡನ ಮುಖದ ಮೇಲೆ ಎಸೆಯುತ್ತಾಳೆ. ಕೋಪದ ಆವೇಶದಲ್ಲಿ ಗಂಡನು ಆಕೆಯನ್ನು ಕೊಲ್ಲುತ್ತಾನೆ. ಅತನು ಕೊಲೆಯ ಅಪರಾಧಿ ಆಗುತ್ತಾನೆಯೆ ?

**17.** ಪ್ರಶ್ನಾರ್ಹವಾದ ಕೈಬರವಣಿಗೆಯ ದಸ್ತಾವೇಜುಗಳನ್ನು ಯಾವ ರೀತಿ ಪರಿಶೀಲಿಸುತ್ತಾರೆ ಮತ್ತು ಅವನ್ನು ಹೇಗೆ ಸಾಬೀತುಪಡಿಸುತ್ತಾರೆ ?

ಒಂದು ಉಯಿಲಿನಲ್ಲಿ ಹೇಳಲಾದ ಆಸ್ತಿಯ ಮೇಲೆ ತನ್ನ ಹಕ್ಕು ಸಾಧಿಸಿ X ಎಂಬಾತನು ಒಂದು ದಾವೆ ಹೂಡುತ್ತಾನೆ. ಆದರೆ, ಈ ಉಯಿಲು ನಕಲಿ ಎಂದು ವಾದಿಸಲಾಗುತ್ತದೆ. ಈ ಉಯಿಲು ಜಾರಿಯಾಗುವಂತೆ ಮಾಡಲು X ಹೇಗೆ ರುಜುವಾತುಪಡಿಸಬೇಕು ?

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** How is the identification of a firearm, involved in a crime, done ? How is the bullet identified ?

**19.** What steps are required to be taken in investigating a case of rape ?

**20.** What is meant by 'White collar crime' ? Refer to some of the practices in the medical and legal professions and in educational institutions. How is this different from traditional crimes ?

**21.** Explain the criminal law relating to Domestic violence.

**22.** Discuss briefly 'Multiple Factor approach' to crime causation.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಒಂದು ಅಪರಾಧದಲ್ಲಿ ಭಾಗಿಯಾಗಿರುವ ಅಗ್ನಿ ಅಸ್ತ್ರವನ್ನು ಹೇಗೆ ಪತ್ತೆ ಮಾಡಲಾಗುತ್ತದೆ ? ಬುಲೆಟ್‌ಅನ್ನು ಹೇಗೆ ಗುರುತಿಸುತ್ತಾರೆ ?

**19.** ಮಾನಭಂಗದ ಪ್ರಕರಣವನ್ನು ತನಿಖೆ ಮಾಡುವಾಗ ಯಾವಯಾವ ಕ್ರಮಗಳನ್ನು ಕೈಗೊಳ್ಳಬೇಕು ?

**20.** 'ವೈಟ್-ಕಾಲರ್' (White-collar) ಅಪರಾಧ ಎಂದರೇನು ? ವೈದ್ಯಕೀಯ ಮತ್ತು ಕಾನೂನು ವೃತ್ತಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವವಂತಹ ಪ್ರಕರಣಗಳನ್ನು ಉಲ್ಲೇಖಿಸಿ. ಸಾಂಪ್ರದಾಯಿಕ ಅರ್ಥದ ಅಪರಾಧಕ್ಕಿಂತ ಇದು ಯಾವ ರೀತಿಯಲ್ಲಿ ಭಿನ್ನ ?

**21.** 'ಪಾರಿವಾರಿಕ ಹಿಂಸೆ' (Domestic violence) ಗೆ ಸಂಬಂಧಿಸಿದ ಕ್ರಿಮಿನಲ್ ಕಾನೂನನ್ನು ವಿವರಿಸಿ.

**22.** 'ಅಪರಾಧ ಉಂಟಾಗುವ ಕಾರಣಕ್ಕೆ' ಸಂಬಂಧಿಸಿದ ಅನೇಕ ಅಂಶಗಳ ದೃಷ್ಟಿಕೋನ'ವನ್ನು ಸಂಕ್ಷಿಪ್ತವಾಗಿ ವಿವರಿಸಿ.

**07/2**

# 2006

## CRIMINOLOGY

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

1. (a) State the organisational set-up of the Police in the State.

   (b) Does intoxication have any bearing on criminal responsibility ?

   (c) What are the forms of punishment prescribed under the Indian Penal Code ?

   (d) State the role of the family in crime and delinquency.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ರಾಜ್ಯದ ಪೋಲಿಸ್ ಸಾಂಖ್ಯಿಕ ವ್ಯವಸ್ಥೆಯನ್ನು ವಿವರಿಸಿ.

   (ಬಿ) ಅಮಲಿನ ಸ್ಥಿತಿಯು ಕ್ರಿಮಿನಲ್ ಅಪರಾಧಗಳಿಗೆ ಕಾರಣವಾಗುವುದೆ ?

   (ಸಿ) ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಯಾವ ಯಾವ ಪ್ರಕಾರದ ಶಿಕ್ಷೆಗಳನ್ನು ತಿಳಿಯಪಡಿಸಲಾಗಿದೆ ?

   (ಡಿ) ಅಪರಾಧ ಮತ್ತು ಬಾಲಾಪರಾಧಗಳ ವಿಷಯದಲ್ಲಿ ಕುಟುಂಬದ ಪಾತ್ರವೇನು ? ನಿರೂಪಿಸಿ.

[Turn over

## PART B

*10×10=100*

*Answer each question in about 100 words. Each question carries 10 marks.*

2. What steps can be taken to control drug abuse ?

3. What is terrorism ? What is the legal response to it ?

4. What are the positive and negative aspects of alcohol ?

5. Is suicide a punishable offence ? Are abetment of suicide and attempt to commit suicide punishable ? Explain.

6. How do modernisation and urbanisation contribute to the causation of crime ?

7. What is meant by 'Probation' ?

8. What are the causes of prostitution ? What steps have been taken to combat prostitution ?

9. Distinguish between 'Parole' and 'Probation'.

10. Explain the role of public participation in probation service.

11. Examine the role of the Police in relation to prevention of crime, patrolling and surveillance.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಮಾದಕ ದ್ರವ್ಯಸೇವನೆಯ ಚಟವನ್ನು ನಿಯಂತ್ರಿಸಲು ಯಾವ ಕ್ರಮಗಳನ್ನು ಕೈಗೊಳ್ಳಬಹುದು ?

**3.** 'ಭಯೋತ್ಪಾದನೆ' ಎಂದರೇನು ? ಇದಕ್ಕೆ ಕಾನೂನು ಯಾವ ರೀತಿಯಲ್ಲಿ ಸ್ಪಂದಿಸಿದೆ ?

**4.** ಆಲ್ಕೊಹಾಲ್ ಸೇವನೆಯ ಒಳ್ಳೆಯ ಮತ್ತು ಕೆಟ್ಟ ಅಂಶಗಳು ಯಾವುವು ?

**5.** ಆತ್ಮಹತ್ಯೆಯು ಶಿಕ್ಷಾರ್ಹ ಅಪರಾಧವೆ ? ಆತ್ಮಹತ್ಯೆಗೆ ದುಷ್ಪ್ರೇರಣೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುವುದು ಶಿಕ್ಷಾರ್ಹವೆ ? ವಿವರಿಸಿ.

**6.** ಅಪರಾಧಗಳು ಉಂಟಾಗುವುದಕ್ಕೆ ಆಧುನಿಕೀಕರಣ ಮತ್ತು ನಗರೀಕರಣಗಳು ಎಷ್ಟರಮಟ್ಟಿಗೆ ಕಾರಣವಾಗಿವೆ ?

**7.** 'ಪ್ರೊಬೇಶನ್' (ಪರಿವೀಕ್ಷಣೆ) ಎಂದರೆ ಏನು ?

**8.** ವೇಶ್ಯಾವೃತ್ತಿಗೆ ಕಾರಣಗಳೇನು ? ವೇಶ್ಯಾವೃತ್ತಿಯನ್ನು ನಿವಾರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

**9.** 'ಪೆರೋಲ್' ಮತ್ತು 'ಪ್ರೊಬೇಶನ್' - ಇವೆರಡರ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

**10.** ಪ್ರೊಬೇಶನ್ ಸೇವೆಯಲ್ಲಿ ಸಾರ್ವಜನಿಕರು ಪಾಲುಗೊಳ್ಳುವುದರ ಪಾತ್ರವೇನು ? ವಿವರಿಸಿ.

**11.** ಅಪರಾಧಗಳನ್ನು ತಡೆಗಟ್ಟುವುದು, ಗಸ್ತು ಕೆಲಸ ಹಾಗೂ ಕಣ್ಗಾವಲಿಗೆ ಸಂಬಂಧಿಸಿದಂತೆ ಪೋಲಿಸರು ಯಾವ ರೀತಿ ಪಾತ್ರವಹಿಸುತ್ತಾರೆ ? ಪರಿಶೀಲಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** What is the object of enacting the Dowry Prohibition Act, 1961 ? What acts are prohibited under the Act ?

X, who knows the families of A and B, brings about the marriage between A's son and B's daughter. X gets for A Rs. 5 lakhs as dowry from B. Is X guilty of any offence ?

**13.** State the objectives of the Juvenile Justice Act, 1986.

A juvenile, who is 15 years old has committed an offence. He is produced before a Juvenile Court. What orders can be passed by the Court ?

**14.** What is meant by a 'charge' ? What should be the content of the 'charge' ?

Raghuvir and 3 others were held guilty of murder under Section 302 read with Section 34, by the Sessions Court. Raghuvir was 16 years old at the time of commission of the offence. The High Court confirmed the sentence of life imprisonment. Raghuvir appeals to the Supreme Court. Decide.

**15.** What is the importance of 'Scene of Occurrence' ? How is it protected ?

**16.** What were the recommendations made by the Justice A.N. Mulla Jail Committee in respect of jail reforms ?

**17.** Write a note on 'Borstal school' as a correctional institution.

A child of 17 years is being prosecuted for the offence of murder. Which court should try the case ? The Sessions Court or any other Court/Board ? By the time the trial begins, he attains 18 years. Who should try the case ?

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ವರದಕ್ಷಿಣೆ ನಿಷೇಧ ಕಾಯಿದೆ, 1961, ಇದನ್ನು ಜಾರಿಗೆ ತಂದ ಉದ್ದೇಶವೇನು ? ಈ ಕಾಯಿದೆಯ ಪ್ರಕಾರ ಯಾವ ಯಾವ ಕೃತ್ಯಗಳನ್ನು ನಿಷೇಧಿಸಲಾಗಿದೆ ?

A ಮತ್ತು B ಅವರ ಕುಟುಂಬಗಳಿಗೆ ಪರಿಚಿತನಾಗಿದ್ದ X ಎಂಬಾತನು A ಯ ಮಗ ಹಾಗೂ B ಯ ಮಗಳ ನಡುವೆ ಮದುವೆ ನಡೆಯುವಂತೆ ಮಾಡುತ್ತಾನೆ. B ಯಿಂದ A ಗಾಗಿ 5 ಲಕ್ಷ ರೂ.ಗಳನ್ನು ವರದಕ್ಷಿಣೆಯಾಗಿ ಬರುವಂತೆ X ಸ್ವೀಕರಿಸುತ್ತಾನೆ. ಇಲ್ಲಿ X ನನ್ನು ಅಪರಾಧಿ ಎಂದು ಪರಿಗಣಿಸಬಹುದೆ ?

**13.** 1986 ರ ಬಾಲಾಪರಾಧಿ ನ್ಯಾಯ ಕಾಯಿದೆಯ ಧ್ಯೇಯಗಳೇನು ? ನಿರೂಪಿಸಿ.

15 ವರ್ಷದ ಒಬ್ಬ ಬಾಲಕನು ಒಂದು ಅಪರಾಧವನ್ನು ಮಾಡುತ್ತಾನೆ. ಆತನನ್ನು ಬಾಲಾಪರಾಧಿ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುತ್ತದೆ. ನ್ಯಾಯಾಲಯವು ಯಾವ ಆದೇಶಗಳನ್ನು ನೀಡಬಹುದು ?

**14.** 'ಆರೋಪ' ಎಂದರೇನು ? ಒಂದು ಆರೋಪದಲ್ಲಿ ಇರಬೇಕಾದ ಅಂಶಗಳು ಯಾವುವು ?

ರಘುವೀರ್ ಮತ್ತು ಇನ್ನಿತರ ಮೂವರು, 34ನೇ ಪರಿಚ್ಛೇದದೊಂದಿಗೆ ಬದಲಾದಂತೆ 302 ನೇ ಪರಿಚ್ಛೇದದ ಅನ್ವಯ, 'ಕೊಲೆಯ ಅಪರಾಧಿಗಳು' ಎಂದು ಸೆಷನ್ಸ್ ನ್ಯಾಯಾಲಯವು ತೀರ್ಪು ನೀಡುತ್ತದೆ. ಈ ಅಪರಾಧವನ್ನು ಮಾಡಿದ ಸಂದರ್ಭದಲ್ಲಿ ರಘುವೀರನ ವಯಸ್ಸು 16 ವರ್ಷ. ಉಚ್ಚ ನ್ಯಾಯಾಲಯವು ಜೀವಾವಧಿ ಶಿಕ್ಷೆಯ ಆಜ್ಞೆಯನ್ನು ದೃಢೀಕರಿಸುತ್ತದೆ. ರಘುವೀರ್, ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗುತ್ತಾನೆ. ನಿಮ್ಮ ತೀರ್ಮಾನವೇನು ?

**15.** "ಘಟನೆ ಸಂಭವಿಸಿದ ಸ್ಥಳ'ದ ಪ್ರಾಮುಖ್ಯತೆ ಏನು ? ಇದನ್ನು ಹೇಗೆ ರಕ್ಷಿಸಲಾಗುತ್ತದೆ ?

**16.** ಜೈಲು ಸುಧಾರಣೆಗಳಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎ.ಎನ್. ಮುಲ್ಲಾ ಜೈಲು ಸಮಿತಿಯು ಮಾಡಿದ ಶಿಫಾರಸುಗಳು ಯಾವುವು ?

**17.** ಒಂದು ಸುಧಾರಕ ಸಂಸ್ಥೆಯಾಗಿ "ಬಾರ್‌ಸ್ಟಲ್ ಸ್ಕೂಲ್" ಕುರಿತು ಟಿಪ್ಪಣಿ ಬರೆಯಿರಿ.

17 ವರ್ಷದ ಒಬ್ಬ ಹುಡುಗನನ್ನು ಕೊಲೆಯ ಅಪರಾಧಕ್ಕಾಗಿ ವಿಚಾರಣೆಗೆ ಗುರಿಪಡಿಸಲಾಗಿದೆ. ಈ ಬಗ್ಗೆ ಯಾವ ನ್ಯಾಯಾಲಯವು ವಿಚಾರಣೆ ನಡೆಸಬೇಕು ? ಸೆಷನ್ಸ್ ನ್ಯಾಯಾಲಯವೆ ? ಅಥವಾ ಇನ್ನಿತರ ನ್ಯಾಯಾಲಯ/ಮಂಡಳಿಯೆ ? ವಿಚಾರಣೆ ಆರಂಭವಾಗುವಷ್ಟರಲ್ಲಿ ಆತ 18 ರ ವಯಸ್ಸು ತಲುಪಿರುತ್ತಾನೆ. ಯಾರು ವಿಚಾರಣೆ ನಡೆಸಬೇಕು ?

3×30=90

## PART D

*Answer any* ***three*** *of the following questions, each in about 300 words. Each question carries 30 marks.*

**18.** What is meant by 'Open air prisons' ? What are its characteristics and advantages ?

**19.** Explain the concept of Punishment. What are the theories of punishment prevalent in the legal system ? Explain each one.

**20.** Write a note on Juvenile Justice in India.

**21.** State the procedure to be followed during the investigation of any cognizable offence. What report is required to be filed ?

**22.** Examine the powers of the Court under the Probation of Offenders Act, 1958, in the following situations :

(a) A first offender is held guilty of an offence punishable with not more than three years imprisonment or fine or both.

(b) A person is found guilty of an offence not punishable with death or imprisonment for life.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** 'ಬಯಲು ಬಂದೀಖಾನೆ' ಎಂದರೇನು ? ಇದರ ವಿಶಿಷ್ಟ ಲಕ್ಷಣಗಳೇನು ಮತ್ತು ಇದರ ಅನುಕೂಲಗಳೇನು ?

**19.** 'ಶಿಕ್ಷೆ'ಯ ಪರಿಕಲ್ಪನೆಯನ್ನು ವಿವರಿಸಿ. ಕಾನೂನು ವ್ಯವಸ್ಥೆಯಲ್ಲಿ ಪ್ರಚಲಿತವಿರುವ ಶಿಕ್ಷಾ ಸಿದ್ಧಾಂತಗಳು ಯಾವುವು ? ಪ್ರತಿಯೊಂದನ್ನೂ ವಿವರಿಸಿ.

**20.** ಭಾರತದ ಬಾಲಾಪರಾಧಿ ನ್ಯಾಯ ವ್ಯವಸ್ಥೆ ಕುರಿತು ಟಿಪ್ಪಣಿ ಬರೆಯಿರಿ.

**21.** ಯಾವುದೇ ಸಂಜ್ಞೇಯ ಅಪರಾಧದ ವಿಚಾರಣೆಯಲ್ಲಿ ಅನುಸರಿಸಬೇಕಾದ ಕ್ರಮಗಳು ಯಾವುವು ? ಯಾವ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ ?

**22.** ಅಪರಾಧಿಗಳ ಪ್ರೊಬೇಶನ್ ಕಾಯಿದೆ, 1958 ರ ಪ್ರಕಾರ ಕೆಳಕಂಡ ಸಂದರ್ಭಗಳಲ್ಲಿ ನ್ಯಾಯಾಲಯಕ್ಕೆ ಇರುವ ಅಧಿಕಾರಗಳೇನು ? ಪರಿಶೀಲಿಸಿ.

(a) ಮೊದಲ ಅಪರಾಧಿಯನ್ನು, ಎರಡು ವರ್ಷಕ್ಕೆ ಕಡಿಮೆಯಿಲ್ಲದಷ್ಟು ಸೆರೆಮನೆ ವಾಸ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದಾದ ಅಪರಾಧವನ್ನು ಮಾಡಿದ ವ್ಯಕ್ತಿ ಎಂದು ತೀರ್ಮಾನಿಸಲಾದ ಸಂದರ್ಭ.

(b) ಒಬ್ಬ ವ್ಯಕ್ತಿಯನ್ನು ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಯನ್ನು ವಿಧಿಸುವಂತಿಲ್ಲದ ಅಪರಾಧವನ್ನು ಮಾಡಿದ ವ್ಯಕ್ತಿ ಎಂದು ಗುರುತಿಸಲಾಗಿರುವ ಸಂದರ್ಭ.